LIBRARY

**13524**

Reg. No. | | | | | | | | |

**V Semester B.Com./BCTT/LSCM B.Com. (Tourism) Degree Examination,**
**March/April - 2022**
**COMMERCE**
**Costing Methods**
**(CBCS Scheme Regular/Repeaters)**
**Paper : 5.4**

**Time : 3 Hours** **Maximum Marks : 70**

***Instructions to Candidates:***

Answers should be written completely either in Kannada or in English.

## Section - A
## ವಿಭಾಗ - ಎ

Answer any FIVE sub-questions. Each sub-question carries 2 marks. **(5×2=10)**

ಈ ಕೆಳಗಿನ ಯಾವುದಾದರೂ ಐದು ಉಪ ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಪ್ರಶ್ನೆಗೆ ಎರಡು ಅಂಕಗಳು.

1. a) Give the meaning of work uncertified.
   'ಪ್ರಮಾಣೀಕರಿಸದ ಕೆಲಸ' ಅರ್ಥವನ್ನು ತಿಳಿಸಿ.

   b) What is job casting ?
   ಬಿಡಿಕೆಲಸ ವೆಚ್ಚ ನಿರ್ಣಯ ಶಾಸ್ತ್ರವೆಂದರೇನು ?

   c) Mention any two industries where operating costing is used.
   ಕಾರ್ಯನಿರ್ವಹಣಾ ವೆಚ್ಚ ಪದ್ಧತಿಯನ್ನು ಉಪಯೋಗಿಸುವ ಯಾವುದಾದರೂ ಎರಡು ಕೈಗಾರಿಕೆಗಳನ್ನು ತಿಳಿಸಿ.

   d) Give the meaning of 'by-products', with suitable example.
   'ಉಪ ಉತ್ಪನ್ನಗಳು' ಎಂದರೇನೆಂಬುದನ್ನು ಸೂಕ್ತ ಉದಾಹರಣೆಯೊಂದಿಗೆ ಅರ್ಥೈಸಿ.

   e) What is retention money ?
   ಉಳಿಸಿಕೊಂಡ (ಧಾರಣ) ಹಣ ಎಂದರೇನು ?

   f) What is 'Escalation Clause' ?
   'ವರ್ಧಿತ (ಏರಿಕೆ) ಷರತ್ತು' ಎಂದರೇನು ?

   g) What do you mean by 'abnormal process loss' ?
   'ಅಸಾಮಾನ್ಯ ಪ್ರಕ್ರಿಯಾ ನಷ್ಟ' ಎಂದರೇನು ?

[P.T.O.

## Section - B

## ವಿಭಾಗ - ಬಿ

Answer any THREE questions. Each question carries 6 marks. (3×6=18)

ಈ ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದಕ್ಕೂ ಆರು ಅಂಕಗಳು.

2. Briefly explain the different methods of costing.

ವೆಚ್ಚನಿರ್ಣಯಶಾಸ್ತ್ರದ ವಿವಿಧ ವಿಧಾನಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

3. Annual demand for the component: 9000 units; set-up cost per batch Rs. 900; carrying cost per unit of production: 2% per annum, manufacturing cost per unit Rs. 90;

Calculate: a) Economic Batch Quantity and

b) find out the number of batches to be produced to meet the annual requirements.

ಒಂದು ವಸ್ತುವಿನ ವಾರ್ಷಿಕ ಬೇಡಿಕೆ : 9000 ಘಟಕಗಳು, ಸ್ಥಾಪನಾ ವೆಚ್ಚ : ರೂ.900 (ಪ್ರತಿ ಗುಂಪಿಗೆ/ಸಮೂಹಕ್ಕೆ); ವಾರ್ಷಿಕ ಸರಕು ಸಂಗ್ರಹಣಾ ವೆಚ್ಚ (ಪ್ರತಿ ಘಟಕಕ್ಕೆ); 2%, ಉತ್ಪಾದನಾ ವೆಚ್ಚ; ರೂ.900 (ಪ್ರತಿ ಘಟಕಕ್ಕೆ). ಈ ವಿವರಗಳಿಂದ

a) ಸಮರ್ಪಕ ಉತ್ಪಾದನಾ ಪ್ರಮಾಣವನ್ನು ಹಾಗೂ

b) ವಾರ್ಷಿಕ ಬೇಡಿಕೆಯನ್ನು ಪೂರೈಸಲು ಉತ್ಪಾದಿಸಬೇಕಾದ ಒಟ್ಟು ಗುಂಪು (ಬ್ಯಾಚ್)ಗಳನ್ನು ಕಂಡುಹಿಡಿಯಿರಿ.

4. The following information relates to Contract No. 971

| Particulars | Amount (Rs.) |
|---|---|
| Contract Price | 80,00,000 |
| Materials | 7,00,000 |
| Labour | 5,00,000 |
| Tools & Equipment | 5,00,000 |
| Plant | 12,00,000 |
| Materials at site | 1,00,000 |
| Tools & Equipment at the end | 4,50,000 |
| Depreciate Plant @ 5% | |
| Work-in-Progress | |
| Work Certified | 12,00,000 |
| Work Uncertified | 2,00,000 |
| Cash received | 10,00,000 |
| Date of commencement of contract | 01-06-2021 |

Prepare Contract account as on 31st March 2022.

ಈ ಕೆಳಗಿನ ವಿವರಗಳು ಗುತ್ತಿಗೆ ನಂ.971 ಕ್ಕೆ ಸಂಬಂಧಿಸಿವೆ.

| ವಿವರಗಳು | ಮೊತ್ತ (ರೂ.) |
|---|---|
| ಗುತ್ತಿಗೆಯ ಮೊತ್ತ | 80,00,000 |
| ಸಾಮಗ್ರಿಗಳು | 7,00,000 |
| ಕೂಲಿ | 5,00,000 |
| ಪರಿಕರ ಮತ್ತು ಸಲಕರಣೆಗಳು | 5,00,000 |
| ಯಂತ್ರಗಳು | 12,00,000 |
| ನಿವೇಶನದಲ್ಲಿರುವ ಸಾಮಗ್ರಿಗಳ ಅಂತಿಮ ದಾಸ್ತಾನು | 1,00,000 |
| ಪರಿಕರ ಮತ್ತು ಸಲಕರಣೆಗಳ ಮೊತ್ತ(31.3.2022 ರಲ್ಲಿ) | 4,50,000 |
| ಯಂತ್ರಗಳ ಮೇಲಿನ ಸವಕಳಿ 5% | |
| ಪ್ರಗತಿಯಲ್ಲಿರುವ ಕೆಲಸ: | |
| ಪ್ರಮಾಣೀಕರಿಸಿದ ಕೆಲಸ | 12,00,000 |
| ಪ್ರಮಾಣೀಕರಿಸದ ಕೆಲಸ | 2,00,000 |
| ಗುತ್ತಿಗೆ ನೀಡಿದವರಿಂದ ಪಡೆದ ಹಣ | 10,00,000 |
| ಗುತ್ತಿಗೆಯ ಪ್ರಾರಂಭದ ದಿನಾಂಕ | 01-06-2021 |

31.03.2022 ಕ್ಕೆ ಕೊನೆಗೊಳ್ಳುವ ವರ್ಷಕ್ಕೆ ಸಂಬಂಧಿಸಿದಂತೆ ಗುತ್ತಿಗೆ ನಂ. 971 ರ ಖಾತೆಯನ್ನು ತಯಾರಿಸಿ.

5. A Transport company is running 5 busses between two cities which are 100 Kms apart. The seating capacity of each bus is 50 passengers. The actual passengers carried were 80%. Each bus made one round trip per day. All the busses run on all the days of the month. Calculate for the month of January 2022: a) Total Kms and b) Total Passenger Kms.

ಒಂದು ಸಾರಿಗೆ ಸಂಸ್ಥೆಯು 100 ಕಿ.ಮೀ. ಅಂತರವಿರುವ ಎರಡು ನಗರಗಳ ಮಧ್ಯೆ 5 ಬಸ್ಸುಗಳನ್ನು ಓಡಿಸುತ್ತಿದೆ. ಪ್ರತಿ ಬಸ್ಸಿನ ಆಸನ ಸಾಮರ್ಥ್ಯ 50 ಪ್ರಯಾಣಿಕರು. ಪ್ರಯಾಣಿಸಿದ ಸರಾಸರಿ ಪ್ರಯಾಣಿಕರ ಸಂಖ್ಯೆ : ಶೆ. 80 ರಷ್ಟು. ಪ್ರತಿ ಬಸ್ಸು ದಿನಕ್ಕೆ ಒಂದು ಬಾರಿ ಒಂದು ನಗರದಿಂದ ಮತ್ತೊಂದು ನಗರಕ್ಕೆ ಹೋಗಿ ವಾಪಸ್ಸು ಬರುತ್ತದೆ. ಎಲ್ಲ ಬಸುಗಳು ತಿಂಗಳಿನ ಎಲ್ಲ ದಿನಗಳಲ್ಲೂ ಸಂಚರಿಸುತ್ತವೆ.

ಈ ಮೇಲಿನ ವಿವರಗಳಿಂದ ಜನವರಿ 2022 ಕ್ಕೆ ಸಂಬಂಧಿಸಿದಂತೆ a) ಒಟ್ಟು ಕಿ.ಮೀ.ಗಳು ಮತ್ತು b) ಒಟ್ಟು ಪ್ರಯಾಣಿಕ ಕಿ.ಮೀ.ಗಳನ್ನು ಕಂಡುಹಿಡಿಯಿರಿ.

6. A factory producing article 'X' also yields Y and Z as by-products. The Joint cost of manufacture and subsequent expenses are as below:

| Particulars | Joint Expenses (Rs.) | Subsequent Expenses (Rs.) X | Y | Z |
|---|---|---|---|---|
| Materials | 1,00,000 | 20,000 | 10,000 | 5,000 |
| Labour | 50,000 | 15,000 | 10,000 | 2,500 |
| Overheads | 25,000 | 5,000 | 5,000 | 2,500 |
| **Total** | **1,75,000** | **40,000** | **25,000** | **10,000** |
| Selling Prices | | 2,50,000 | 1,00,000 | 75,000 |
| Estimated profit on selling price | | 35% | 40% | 50% |

Show how you would propose to apportion the joint cost of manufacture, under reverse cost method.

ಒಂದು ಕಾರ್ಖಾನೆಯಲ್ಲಿ ಮೂಲ ಉತ್ಪನ್ನ 'X' ಅನ್ನು ತಯಾರಿಸುವಾಗ 'Y' ಮತ್ತು 'Z' ಎಂಬ ಉಪ ಉತ್ಪನ್ನಗಳು ತಯಾರಾಗುತ್ತವೆ. ಇವುಗಳ ಜಂಟಿ ಖರ್ಚಿನ ಹಾಗೂ ತರುವಾಯದ ಖರ್ಚಿನ ವಿವರಗಳು ಈ ಕೆಳಕಂಡಂತಿವೆ.

| ವಿವರಗಳು | ಜಂಟಿ ಖರ್ಚುಗಳು (ರೂ.) | ತರುವಾಯದ ಖರ್ಚುಗಳು (ರೂ.) X | Y | Z |
|---|---|---|---|---|
| ಸಾಮಗ್ರಿಗಳು | 1,00,000 | 20,000 | 10,000 | 5,000 |
| ಕೂಲಿ | 50,000 | 15,000 | 10,000 | 2,500 |
| ಮೇಲ್ವೆಚ್ಚ | 25,000 | 5,000 | 5,000 | 2,500 |
| ಒಟ್ಟು | **1,75,000** | **40,000** | **25,000** | **10,000** |
| ಮಾರಾಟದ ಬೆಲೆ | | 2,50,000 | 1,00,000 | 75,000 |
| ಮಾರಾಟದ ಬೆಲೆಯ ಮೇಲಿನ ಅಂದಾಜು ಲಾಭ | | 35% | 40% | 50% |

ಜಂಟಿ ಖರ್ಚುಗಳನ್ನು ಯಾವ ರೀತಿ ಹಂಚುವಿರೆಂಬುದನ್ನು ಹಿಮ್ಮುಖ ಖರ್ಚು ಲೆಕ್ಕಾಚಾರದ ವಿಧಾನದಲ್ಲಿ ಜಂಟಿ ಖರ್ಚುಗಳನ್ನು ವಿಭಾಗಿಸುವ ಪಟ್ಟಿಯನ್ನು ತಯಾರಿಸಿ.

## Section - C

## ವಿಭಾಗ - ಸಿ

Answer any THREE questions. Each question carries fourteen marks. (3×14=42)

ಈ ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದಕ್ಕೂ ಹದಿನಾಲ್ಕು ಅಂಕಗಳು.

7. Product 'A' passes are through three process for completion. For the month ending December 2021 the following the details:

| **Particulars** | **Total** | Process **I** | **II** | **III** |
|---|---|---|---|---|
| Direct materials (Rs.) | 74,620 | 10,000 | 30,000 | 34,620 |
| Direct labour (Rs.) | 2,90,000 | 2,00,000 | 40,000 | 50,000 |
| Direct expenses (Rs.) | 75,000 | 40,000 | 20,000 | 15,000 |
| Production overhead (Rs.) | 15,590 | 4,350 | 8,710 | 2,530 |
| Normal loss | | 3% | 5% | 10% |
| Sale of scrap per unit (Rs.) | | 10 | 30 | 50 |
| Production in units | | 950 | 900 | 830 |

1,000 units at Rs. 100 per unit were issued to process I.

Prepare process accounts, abnormal loss and abnormal gain account.

'A' ವಸ್ತುವು ಮೂರು ಉತ್ಪಾದನಾ ಹಂತಗಳ ಪ್ರಕ್ರಿಯೆಗಳಿಂದ ಸಿದ್ಧ ವಸ್ತುವಾಗುತ್ತದೆ. ಡಿಸೆಂಬರ್ 2021 ರ ತಿಂಗಳಾಂತ್ಯಕ್ಕೆ ಈ ಕೆಳಕಂಡ ವಿವರಗಳು ಲಭ್ಯವಾಗಿವೆ.

| ವಿವರಗಳು | | ಪ್ರಕ್ರಿಯೆಗಳು | | |
|---|---|---|---|---|
| | ಒಟ್ಟು | I | II | III |
| ನೇರ ಕಚ್ಚಾ ಸಾಮಗ್ರಿಗಳು (ರೂ.) | 74,620 | 10,000 | 30,000 | 34,620 |
| ನೇರ ಕೂಲಿ (ರೂ.) | 2,90,000 | 2,00,000 | 40,000 | 50,000 |
| ನೇರ ಖರ್ಚುಗಳು (ರೂ.) | 75,000 | 40,000 | 20,000 | 15,000 |
| ಉತ್ಪಾದನಾ ಮೇಲ್ವೆಚ್ಚಗಳು (ರೂ.) | 15,590 | 4,350 | 8,710 | 2,530 |
| ಸಾಮಾನ್ಯ ನಷ್ಟ | | 3% | 5% | 10% |
| ತ್ಯಾಜ್ಯದ (scrap) ಮಾರಾಟದ ಬೆಲೆ (ಪ್ರತಿ ಘಟಕಕ್ಕೆ) (ರೂ.) | | 10 | 30 | 50 |
| ಉತ್ಪಾದಿತ ಘಟಕಗಳು | | 950 | 900 | 830 |

ಪ್ರತಿ ಘಟಕಕ್ಕೆ 100 ರೂ.ಗಳಂತೆ 1,000 ಘಟಕಗಳನ್ನು I ನೇ ಉತ್ಪಾದನಾ ಪ್ರಕ್ರಿಯೆಗೆ ನೀಡಲಾಗಿದೆ. ಉತ್ಪಾದನಾ ಪ್ರಕ್ರಿಯೆಯ ವಿವಿಧ ಹಂತದ ಖಾತೆಗಳನ್ನು ಹಾಗೂ ಅಸಾಮಾನ್ಯ ನಷ್ಟ ಮತ್ತು ಅಸಾಮಾನ್ಯ ಲಾಭದ ಖಾತೆಗಳನ್ನು ತಯಾರಿಸಿ.

8. A transport service company is running 4 buses between two cities, which are 150 Kms apart. Seating capacity of each is 60 passengers. The following particulars were obtained from the books for the month of November 2021.

| | |
|---|---|
| Wages of drivers, conductors, cleaners | Rs. 2,40,000 |
| Diesel, oil etc., | Rs. 4,00,000 |
| Salaries of office staff | Rs. 1,00,000 |
| Repairs and maintenance | Rs. 80,000 |
| Taxes and insurance | Rs. 1,60,000 |
| Depreciation | Rs. 2,60,000 |
| Interest and other charges | Rs. 2,00,000 |

Actual passengers carried were 90% of the seating capacity. All the busses run 25 days of the month. Each bus made one round trip per day. Find out:

Cost per Kilometer and b) Cost per Passenger Kilometer

ಒಂದು ಸಾರಿಗೆ ಸೇವಾ ಸಂಸ್ಥೆಯು 150 ಕಿ.ಮೀ. ಅಂತರವಿರುವ ಎರಡು ನಗರಗಳ ಮಧ್ಯೆ 4 ಬಸ್ಸುಗಳನ್ನು ಓಡಿಸುತ್ತಿದೆ. ಪ್ರತಿ ಬಸ್ಸಿನ ಆಸನ ಸಾಮರ್ಥ್ಯ 60 ಪ್ರಯಾಣಿಕರು. ನವೆಂಬರ್ 2021 ಕ್ಕೆ ಸಂಬಂಧಿಸಿದ ಖರ್ಚಿನ ವಿವರಗಳನ್ನು ಸಂಸ್ಥೆಯ ಲೆಕ್ಕಪತ್ರದ ದಾಖಲೆಗಳಿಂದ ಪಡೆದು ಈ ಕೆಳಗೆ ನೀಡಲಾಗಿದೆ.

| | |
|---|---|
| ಚಾಲಕರು, ನಿರ್ವಾಹಕರು ಮತ್ತು ಕ್ಲೀನರ್‌ಗಳ ಮಜೂರಿ (ಕೂಲಿ) | Rs.2,40,000 |
| ಇಂಧನ, ಕೀಲೆಣ್ಣೆ, ಇತ್ಯಾದಿ | Rs.4,00,000 |
| ಕಛೇರಿ ಸಿಬ್ಬಂದಿಯ ಸಂಬಳ | Rs.1,00,000 |
| ದುರಸ್ತಿ ಮತ್ತು ನಿರ್ವಹಣೆ | Rs.80,000 |
| ತೆರಿಗೆ ಮತ್ತು ವಿಮೆ | Rs.1,60,000 |
| ಸವಕಳಿ | Rs.2,60,000 |
| ಬಡ್ಡಿ ಮತ್ತು ಇತರೆ ವೆಚ್ಚಗಳು | Rs.2,00,000 |

ಪ್ರಯಾಣಿಸಿದ ಸರಾಸರಿ ಪ್ರಯಾಣಿಕರ ಸಂಖ್ಯೆ ಶೇ. 90 ರಷ್ಟು ಎಲ್ಲ ಬಸುಗಳು ತಿಂಗಳಿನಲ್ಲಿ 25 ದಿನಗಳು ಸಂಚರಿಸುತ್ತವೆ. ಪ್ರತಿ ಬಸ್ಸು ದಿನಕ್ಕೆ ಒಂದು ಬಾರಿ ಒಂದು ನಗರದಿಂದ ಮತ್ತೊಂದು ನಗರಕ್ಕೆ ಹೋಗಿ ವಾಪಸ್ಸು ಬರುತ್ತದೆ.

ಸಂಸ್ಥೆಗೆ a) ಪ್ರತಿ ಒಂದು ಕಿಲೋಮೀಟರ್‌ಗೆ ತಗಲುವ ಖರ್ಚು ಮತ್ತು b) ಪ್ರತಿ ಒಂದು ಪ್ರಯಾಣಿಕ ಕಿಲೋಮೀಟರ್‌ಗೆ ತಗಲುವ ಖರ್ಚಿನ ಮೊತ್ತಗಳನ್ನು ಕಂಡು ಹಿಡಿಯಿರಿ.

9. A company have undertaken the construction of a building on 01-07-2020 for Rs. 99,00,000. The details regarding contract as on 31-03-2021 are as follows:

| **Particulars** | **Amount (Rs.)** |
|---|---|
| Materials: | |
| Direct from suppliers | 25,00,000 |
| From Stores | 5,00,000 |
| Direct labour | 25,00,000 |
| Direct expenses | 2,00,000 |
| Value of plant installed at site | 10,00,000 |
| Administrative overheads chargeable to the contract | 50,000 |
| Materials returned to suppliers | 25,000 |
| Materials returned to stores | 5,000 |
| Materials on hand at site | 22,500 |
| Accrued direct labour | 30,000 |
| Accrued chargeable expenses | 10,000 |
| Sub-contract cost | 3,00,000 |
| Work Certified as approved by the architect | 60,00,000 |
| Work Uncertified at cost | 2,00,000 |

Cash received 90% of work certified

Charge depreciation@ 15% p.a., on the value of plant

Prepare: 1) Contract Account and 2) Contractee Account

ಒಂದು ಕಂಪನಿಯು 90 ಲಕ್ಷ ರೂಪಾಯಿಗಳ ಕಟಡ ನಿರ್ಮಾಣದ ಗುತ್ತಿಗೆಯ ಕಾರ್ಯವನ್ನು ದಿನಾಂಕ 01-07-2020 ರಂದು ಕೈಗೊಂಡಿದೆ. 31-03-2021 ರ ವರ್ಷಾಂತ್ಯದ ವೇಳೆಗೆ ಗುತ್ತಿಗೆಗೆ ಸಂಬಂಧಿಸಿದ ವಿವರಗಳು ಈ ಕೆಳಕಂಡಂತಿವೆ.

| **ವಿವರಗಳು** | **ಮೊತ್ತ (ರೂ.)** |
|---|---|
| ಸಾಮಗ್ರಿಗಳು: | |
| ಸರಬರಾಜುದಾರರಿಂದ ನೇರವಾಗಿ ಕಳುಹಿಸಿದ್ದು | 25,00,000 |
| ಮಳಿಗೆಯಿಂದ ಕಳುಹಿಸಿದ್ದು | 5,00,000 |
| ನೇರ ಕೂಲಿ | 25,00,000 |
| ನೇರ ಖರ್ಚುಗಳು | 2,00,000 |
| ನಿವೇಶನದಲ್ಲಿ ಸ್ಥಾಪಿಸಿರುವ ಯಂತ್ರ ಸಾವರಗಳು | 10,00,000 |
| ಗುತ್ತಿಗೆಗೆ ಸಂಬಂಧಿಸಿದ ಆಡಳಿತಾತ್ಮಕ ಮೇಲ್ವೆಚ್ಚಗಳು | 50,000 |
| ಸರಬರಾಜುದಾರರಿಗೆ ಹಿಂದಿರುಗಿಸಿದ ಸಾಮಗ್ರಿಗಳು | 25,000 |
| ಮಳಿಗೆಗೆ ಹಿಂದಿರುಗಿಸಿದ ಸಾಮಗ್ರಿಗಳು | 5,000 |
| ನಿವೇಶನದಲ್ಲುಳಿದಿರುವ ಸಾಮಗ್ರಿಗಳು | 22,500 |
| ನೇರ ಕೂಲಿಯ ಬಾಕಿ (ಸಂಚಿತ) | 30,000 |
| ನೇರ ಖರ್ಚುಗಳ ಬಾಕಿ (ಸಂಚಿತ) | 10,000 |
| ಉಪ-ಗುತ್ತಿಗೆಯ ಮೊತ್ತ | 3,00,000 |
| ವಾಸ್ತುಶಿಲ್ಪಿಯಿಂದ ಪ್ರಮಾಣೀಕರಿಸಲ್ಪಟ್ಟ ಕೆಲಸ | 60,00,000 |
| ಪ್ರಮಾಣೀಕರಿಸದ ಕೆಲಸ | 2,00,000 |

ಗುತ್ತಿಗೆ ನೀಡಿದವರಿಂದ ಪಡೆಯಲಾದ ಹಣ - ಪ್ರಮಾಣೀಕರಿಸಿದ ಕೆಲಸದ ಶೇ.90 ರಷ್ಟು
ಯಂತ್ರ ಸ್ಥಾವರಗಳ ಮೇಲಿನ ಸವಕಳಿ - ವಾರ್ಷಿಕ 15%
1) ಗುತ್ತಿಗೆ ಖಾತೆ ಮತ್ತು (2) ಗುತ್ತಿಗೆ ನೀಡಿದವರ ಖಾತೆಯನ್ನು ತಯಾರಿಸಿ.

**10.** The following expenses were incurred on Job No. J-1234.

| | | |
|---|---|---|
| (a) | Direct Materials | Rs. 45,000 |
| (b) | Direct Wages: | |
| | Department X | 25 hours @ Rs. 90 per hour |
| | Department Y | 20 hours @ Rs. 50 per hour |
| | Department Z | 15 hours @ Rs. 80 per hour |
| (c) | Works overheads of these departments were estimated as under: | |
| | Department X | Rs. 40,000 for 2,500 working hours |
| | Department Y | Rs. 60,000 for 3,000 working hours |
| | Department Z | Rs. 30,000 for 2,250 working hours |

(d) Office overheads were Rs. 2,00,000 when total direct wages paid in ail these departments were Rs. 5,00,000. It is the practice to recover office expenses as a percentage of direct wages.

You are required to calculate the cost of Job No. J-1234 and the price to give a profit of 50% on selling price.

ಈ ಕೆಳಕಂಡ ಖರ್ಚುಗಳು ಬಿಡಿ ಕೆಲಸ J-1234 ಗೆ ಸಂಬಂಧಿಸಿವೆ.

| | | |
|---|---|---|
| (a) | ನೇರ ಸಾಮಗ್ರಿಗಳು | ರೂ.45,000 |
| (b) | ನೇರ ಕೂಲಿ: | |
| | ವಿಭಾಗ X | 25 ಗಂಟೆಗಳು, ಪ್ರತಿ ಗಂಟೆಗೆ ರೂ. 90 ರಂತೆ |
| | ವಿಭಾಗ Y | 20 ಗಂಟೆಗಳು, ಪ್ರತಿ ಗಂಟೆಗೆ ರೂ. 50 ರಂತೆ |
| | ವಿಭಾಗ Z | 15 ಗಂಟೆಗಳು, ಪ್ರತಿ ಗಂಟೆಗೆ ರೂ. 80 ರಂತೆ |
| (c) | ಈ ವಿಭಾಗಗಳ ಕಾರ್ಖಾನೆ ಮೇಲ್ವೆಚ್ಚವನ್ನು ಈ ಕೆಳಕಂಡಂತೆ ಅಂದಾಜು ಮಾಡಲಾಗಿದೆ. | |
| | ವಿಭಾಗ X | 2,500 ಕೆಲಸದ ಗಂಟೆಗಳಿಗೆ ರೂ. 40,000 |
| | ವಿಭಾಗ Y | 3,000 ಕೆಲಸದ ಗಂಟೆಗಳಿಗೆ ರೂ. 60,000 |
| | ವಿಭಾಗ Z | 2,250 ಕೆಲಸದ ಗಂಟೆಗಳಿಗೆ ರೂ. 30,000 |

(d) ಈ ಎಲ್ಲ ವಿಭಾಗಗಳ ನೇರ ಕೂಲಿಯ ಮೊತ್ತವು ರೂ. 5,00,000 ಗಳಿದ್ದಾಗ, ಕಛೇರಿ ಮೇಲ್ವೆಚ್ಚವು ರೂ.2,00,000 ಗಳಾಗಿರುತ್ತದೆ. ಇದುವರೆಗೂ ಪಾಲಿಸಿಕೊಂಡು ಬಂದ ಅಭ್ಯಾಸದ ಪ್ರಕಾರ ಕಛೇರಿ ಮೇಲ್ವೆಚ್ಚವನ್ನು ನೇರ ಕೂಲಿಯ ಶೇಕಡಾವಾರು ಪ್ರಮಾಣದ ಮೇಲೆ ಭರಿಸಲಾಗುತ್ತದೆ.

ಬಿಡಿ ಕೆಲಸ J-1234 ರ ಒಟ್ಟು ವೆಚ್ಚವನ್ನು ಹಾಗೂ ಮಾರಾಟದ ಬೆಲೆಯ ಮೇಲೆ ಶೇ. 50 ರಷ್ಟು ಲಾಭಾಂಶ ಬರುವಂತೆ ಮಾರಾಟದ ಬೆಲೆಯನ್ನು ಕಂಡುಹಿಡಿಯಿರಿ.

11. In manufacturing the main product EXE, a company processes the resulting waste material into two by-products Xl & X2. Using the reverse cost method, you are required to prepare a comparative profit and loss statement of the three products from the following data:

Total cost upto separation point was Rs. 1,36,000.

| **Particulars** | **Main Product EXE** | **By-Product X-1** | **X-2** |
|---|---|---|---|
| Sales (all production) | 3,28,000 | 32,000 | 48,000 |
| Cost after separation | --- | 9,600 | 14,400 |
| Estimated profit % on selling price | ? | 20% | 30% |
| Estimated selling expenses as a percentage to sales | 20% | 20% | 20% |

ಒಂದು ಕಂಪನಿಯು ಮೂಲ ಉತ್ಪನ್ನವಾದ EXE ಯನ್ನು ತಯಾರಿಸುವಾಗ, ಉಳಿದ ತ್ಯಾಜ್ಯದಲ್ಲಿ Xl ಮತ್ತು X2. ಎಂಬ ಎರಡು ಉಪ-ಉತ್ಪನ್ನಗಳನ್ನು ತಯಾರಿಸುತ್ತದೆ. ಈ ಕೆಳಗೆ ಕೊಟ್ಟಿರುವ ವಿವರಗಳಿಂದ ಹಿಮ್ಮುಖ ಖರ್ಚು ಲೆಕ್ಕಾಚಾರ ವಿಧಾನವನ್ನು ಬಳಸಿಕೊಂಡು ತುಲನಾತ್ಮಕ ಲಾಭ ಮತ್ತು ನಷ್ಟದ ಪಟ್ಟಿಯನ್ನು ತಯಾರಿಸಿ.

ಉತ್ಪನ್ನಗಳು ಪ್ರತ್ಯೇಕಗೊಳ್ಳುವವರೆಗಿನ ಒಟ್ಟು ಖರ್ಚು ರೂ.1,36,000.

| ವಿವರಗಳು | ಮೂಲ ಉತ್ಪನ್ನ **EXE** | ಉಪ-ಉತ್ಪನ್ನ **X-1** | **X-2** |
|---|---|---|---|
| ಮಾರಾಟ (ಸಂಪೂರ್ಣ ಉತ್ಪಾದನೆ) | 3,28,000 | 32,000 | 48,000 |
| ಉತ್ಪನ್ನಗಳು ಪ್ರತ್ಯೇಕಗೊಂಡ ನಂತರದ ಖರ್ಚು | --- | 9,600 | 14,400 |
| ಮಾರಾಟದ ಬೆಲೆಯ ಮೇಲೆ ಅಂದಾಜು ಶೇಕಡಾವಾರು ಲಾಭ | ? | 20% | 30% |
| ಮಾರಾಟದ ಮೇಲೆ ಅಂದಾಜು ಶೇಕಡಾವಾರು ಮಾರಾಟದ ಖರ್ಚು | 20% | 20% | 20% |